# “ದಮನ ಹೆಚ್ಚಿದಷ್ಟೂ ದಂಗೆ ತೀವ್ರಗೊಳ್ಳುತ್ತದೆ”

-ಇದು ಚರಿತ್ರೆಯಲ್ಲಿ ಸಾಬೀತಾದ ಸತ್ಯ

ಪ್ರಿಯ ಆದಿವಾಸಿಗಳೇ, ರೈತ-ಕೂಲಿ-ಕಾರ್ಮಿಕರೇ, ಪ್ರಜಾತಾಂತ್ರಿಕ ನಾಕರೀಕರೇ,

ಮಲೆನಾಡಿನ ಶಿವಮೊಗ್ಗ ಚಿಕ್ಕಮಗಳೂರು, ಉಡುಪಿ ಜಿಲ್ಲೆಗಳಲ್ಲಿ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ನೀತಿಸಂಹಿತೆಯ ಜಾರಿಯ ಹೆಸರಿನಲ್ಲಿ ಸುಮಾರು 30-40 ಜನರನ್ನು ಸುಳ್ಳು ಕೇಸುಗಳನ್ನು ಹಾಕಿ ಬಂಧಿಸಿದ್ದಾರೆ. ಈ ಬಗ್ಗೆ ಕೇಳಲು ಬಿಡಿಸಲು ಹೋದವರಿಗೂ ಕಿರುಕುಳ ನೀಡುತ್ತಿದ್ದಾರೆ. ಈ ಮೂಲಕ ಸರ್ಕಾರ ಜನಹೋರಾಟ ನಾಶಗೊಳಿಸಲು ಹಿಂಸಿಸಿ, ಹಣದ ಆಮಿಷಗಳನ್ನೊಡ್ಡಿ ದುರ್ಬಲ ವ್ಯಕ್ತಿಗಳನ್ನು ಸೆಳೆವ ಯತ್ನ ಆರಂಭಿಸಿದೆ.

ಮಲೆನಾಡಿನಲ್ಲಿ ಇವೆಲ್ಲವನ್ನೂ ಈ ಮೊದಲೆ ಅಂದರೆ 8-10ವರ್ಷಗಳ ಹಿಂದೆಯೇ ರಾಷ್ಟ್ರೀಯ ಉದ್ಯಾನ, ಒತ್ತುವರಿಗಳಂತಹ ಅರಣ್ಯ ಯೋಜನೆಗಳ ಹೆಸರಿನಲ್ಲಿ ವಿದೇಶಿ ಕಂಪನಿಗಳ ಹಿತಕಾಯಲು ಮಾಡಬೇಕಿತ್ತು. ಆದರೆ ಅದು ಸಾಧ್ಯವಾಗಲಿಲ್ಲ. ಜನರು ಒಕ್ಕಲೇಳದಿದ್ದಾಗ ಅವರನ್ನು ಹಿಂಸಿಸಿ ಕೊಂದು ಹೆಣವೂ ಸಿಗದಂತೆ ಸುಟ್ಟು ಹಾಕಿ ಜನರನ್ನು ಬೆದರಿಸಿ ಅವರ ನೆಲೆ ಖಾಲಿ ಮಾಡಿಸಿದ ಜೀವ ಹಿಂಡುವ ಘಟನೆಗಳು ಕೇರಳದ ಮಾತುಂಗ, ರಾಜಸ್ಥಾನದ ಗಿರ್ ಆರಣ್ಯ , ಮಲೆನಾಡಿನ ತತ್ಕೊಳದಂತಹ ಕಡೆಗಳಲ್ಲಿ ನಡೆದಿದೆ. ಆದರೆ ಕುದುರೆಮುಖ ರಾಷ್ಟ್ರೀಯ ಉದ್ಯಾನ ವ್ಯಾಪ್ತಿ ಮತ್ತು ಅದರ ಸುತ್ತಮುತ್ತ ಜನರ ಮೇಲೆ ಅಂತಹ ಸಾಮೂಹಿಕ ಹತ್ಯೆ -ದೌರ್ಜನ್ಯಗಳು ನಡೆಯುವ ಮುನ್ನವೇ ಜನರು ಎಚ್ಚೆತ್ತುಕೊಂಡು ಸಶಸ್ತ್ರ ಹೋರಾಟಕ್ಕೆ ಧುಮುಕಿದ್ದಾರೆ.

ಜನರ ವೀರೋಚಿತವಾದ ಹೋರಾಟಗಳನ್ನು ಹತ್ತಿಕ್ಕಲು ಸರ್ಕಾರ ತನ್ನ ಕಾವಲು ನಾಯಿಗಳಾದ ಮಿಲಿಟರಿಯನ್ನು ಛೂಬಿಟ್ಟು ಜನರ ಮೇಲೆ ದಾಳಿಗಿಳಿಸುತ್ತವೆ. ಇದು ಪ್ರಪಂಚದಾದ್ಯಂತ ಶೋಷಕ ಸರ್ಕಾರಗಳಿರುವ ಕಡೆಯಲ್ಲೆಲ್ಲಾ ನ್ಯಾಯ ಕೇಳಿದ ಬಡಜನರನ್ನು ನೋಡಿಕೊಳ್ಳುವ ರೀತಿ. ಇದಕ್ಕೆ ಮಲೆನಾಡು- ಕರಾವಳಿಗಳನ್ನು ಹೊರೆತುಪಡಿಸುವಂತಿಲ್ಲ. ಇದಕ್ಕೆ ಇತ್ತೀಚೆಗೆ ANF ಪಡೆಗಳು ಧರ್ಮಸ್ಥಳದಲ್ಲಿ ಯುವಕನೊಬ್ಬನನ್ನು ವಿನಾಕಾರಣ ಗುಂಡಿಟ್ಟುಕೊಂದಿದ್ದು, ಬಾಳೆಹೊನ್ನೂರಿನಲ್ಲಿ ANF ವ್ಯಾನಿನಡಿಯಲ್ಲಿ ಸಿಲುಕಿ ಸತ್ತ ಬಾಲಕನ ಸಾವುಗಳೇ ಸಾಕ್ಷಿ.

ಇವೆಲ್ಲದರ ಉದ್ದೇಶ ನ್ಯಾಯ ಕೇಳುವ ಜನರನ್ನು ಬಾಯಿ ಮುಚ್ಚಿಸಿ ಪ್ರಶ್ನಿಸಲಾರದಂತೆ ಮಾಡುವುದು. ಅವರ ಹೋರಾಟದ ಪ್ರಜ್ಞೆಯನ್ನು ಮಂಕುಗೊಳಿಸುವುದು. ಈ ಮೂಲಕ ದೇಶದ ಶ್ರೀಮಂತರ ಹಿತಾಸಕ್ತಿಯನ್ನು ರಕ್ಷಿಸುವುದು ಹಾಗೂ ಅವರ ಲೂಟಿಯನ್ನು ಮುಂದುವರಿಸಲು ಅನುವು ಮಾಡಿಕೊಡುವುದು.

ಸರ್ಕಾರಿ ಪಡೆಗಳು ಈ ದಮನಕ್ಕೆ ನಮ್ಮ ಪಕ್ಷದ ಚಟುವಟಿಕೆಯನ್ನು ನೆಪವಾಗಿ ಮುಂದೊಡ್ಡುತ್ತಿವೆ. ಇದನ್ನೇ ಜನರೊಳಗೂ ಪ್ರಚಾರ ಪಡಿಸಲು ಕೆಲವರೊಳಗೆ ಇದನ್ನು ತುಂಬುತ್ತಿದ್ದಾರೆ. ಇಂತಹವರು ಇದರ ವಾಸ್ತವ ಅರಿತು ಜನರೊಂದಿಗೆ ಇರಲು ಸಾಧ್ಯವಿಲ್ಲವೆಂದಾದರೆ ತೆಪ್ಪಗಿರುಬಹುದಲ್ಲ. ಬದಲಿಗೆ ತಮ್ಮ ಭಯ ಅವಿಶ್ವಾಸಗಳನ್ನು ಜನರೊಳಗೆ ಬಿತ್ತುತ್ತಾರೆ. ಅವರು, “ನಕ್ಸಲೀಯರು ಇರುವುದರಿಂದಲೇ ಸಮಸ್ಯೆ. ಹೀಗೆಲ್ಲ ಆಗುತ್ತಿರುವುದು ಅವರಿಂದಲೇ ಅವರನ್ನು ದೂರ ಇಡಬೇಕು ” ಇತ್ಯಾದಿ ಹೇಳಿಕೊಳ್ಳುತ್ತಾ ತಿರುಗುತ್ತಾರೆ. ಸರ್ಕಾರವಂತೂ ನಿಜವಾದ ಸಮಸ್ಯೆಯನ್ನು ಮುಚ್ಚಿಹಾಕಲು ಇದನ್ನು ವ್ಯವಸ್ಥಿತವಾಗಿಯೇ ಪ್ರಚಾರ ಮಾಡುತ್ತದೆ. ಆದರೆ ಶೋಷಿತ ಜನರು ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಸಮಸ್ಯೆಗಳಿಲ್ಲದೆ ಸುಖಾಸುಮ್ಮನೇ ಹೋರಾಟಗಳು ಹುಟ್ಟಿಕೊಳ್ಳುವುದಿಲ್ಲ. ಆಲ್ಲದೆ ಅದರ ತೀವ್ರತೆಯನ್ನಾಧರಿಸಿ ಹೋರಾಟವು ತೀವ್ರಗೊಳ್ಳುತ್ತದೆ ಅಲ್ಲವೇ ? ಈ ಸರ್ಕಾರ ಮತ್ತದರ ಛೇಲಾಗಳು ಇಲ್ಲಿನ ಮೂಲ ಸಮಸ್ಯೆ, ಹೋರಾಟದ ಕಾರಣಗಳನ್ನು ಮುಚ್ಚಿಟ್ಟು “ನಕ್ಸಲ್ ಸಮಸ್ಯೆ” ಎನ್ನುತ್ತಾ ಜನರನ್ನು ದಮನಕ್ಕೊಳಪಡಿಸಿ ಹೋರಾಟದಿಂದ ಹಿಂದ್ಸರಿಸಲು ಪ್ರಯತ್ನಿಸುತ್ತಿದೆ. ಸರ್ಕಾರ ಜನ ಸಮಸ್ಯೆಗಳಿಗೆ ಫ್ಯಾಸಿಸ್ಟ್ ವಿಧಾನವನ್ನು ಪ್ರಯೋಗಿಸಿದರೆ ಪ್ರತಿಯಾಗಿ ಪ್ರಜ್ಞಾವಂತ ಜನರೂ ತೀವ್ರ ಸ್ವರೂಪದ ಹೋರಾಟಕ್ಕೆ ಇಳಿಯುತ್ತಾರೆ. ಇದು ಅನಿವಾರ್ಯ ಕೂಡ. ಇದಕ್ಕೆ ನಮ್ಮ ಮುಂದಿರುವ ಪಶ್ಚಿಮ ಬಂಗಾಳದ ನಂದಿ ಗ್ರಾಮದ ಲಾಲ್‌ಘಡ್‌ಗಳ ಹೋರಾಟಗಳೇ ಜೀವಂತ ಸಾಕ್ಷಿ.

ಪ್ರೀತಿಯ ರೈತ ಕೂಲಿ ಜನರೇ. ಹಸಿವು ಆದಾಗ ನಾವೇ ಉಣ್ಣಬೇಕೆ ಹೊರತು ಇನ್ಯಾರೋ ಉಂಡರಾಗುವುದಿಲ್ಲ ಅಲ್ಲವೇ ? ಈ ದಮನದ ವಿರುದ್ಧವೋ ಹಾಗೆಯೇ ನಮ್ಮ ಜನರ ಮೇಲೆಯೇ ದಮನ ತಂದಿರುವಾಗ ಇಲ್ಲಿನ ಶಾಸಕರೋ, ಭೂಮಾಲೀಕರೋ, ಸರ್ಕಾರವೋ ಮಾತನಾಡುತ್ತದೆಂದು ಜನರು ನಿರೀಕ್ಷಿಸಲು ಆಗುವುದಿಲ್ಲ. ಅವರು ಈ ಬಗ್ಗೆ ಮಾತನಾಡುವುದು ಇಲ್ಲ. ಏಕೆಂದರೆ ದಮನ ಅವರ ಪರವಾದ್ದು. ದುಡಿವ ಜನರ ಮೇಲಿನದು. ಹಾಗೆಯೇ ನಾವೇ, ನಮ್ಮಂತ ಜನರೇ ನಮ್ಮೊಂದಿಗೆ ನಿಲ್ಲುತ್ತಾರೆ.

<u>ಜನರೇನು ಮಾಡಬೇಕು ?</u> ಈ ಹಿಂದೆ ಸರ್ಕಾರ ಅರಣ್ಯ ಇಲಾಖೆ/ಪೋಲೀಸರನ್ನು ಬಿಟ್ಟು ಒಕ್ಕಲೆಬ್ಬಿಸಹೊರಟಾಗ ಹೆಂಗಸರು ಕತ್ತಿ ಹಿಡಿದು ನಿಂತರೆ, ಸಾವಿರಾರು ಜನ (ಹೆಂಗಸರು/ಮಕ್ಕಳೆನ್ನದೆ) ಒಗ್ಗಟ್ಟಾಗಿ ಎದುರಿಸಿ ಹಿಮ್ಮೆಟ್ಟಿಸಲಾಗಿದೆ. ಮೆಣಸಿನಹಾಡ್ಯದಲ್ಲಿ ನಮ್ಮ ಸಂಗಾತಿ ಗೌತಮ್‌ನೊಂದಿಗೆ ಜನಹೋರಾಟದಲ್ಲಿ ಹೆಗಲಾಗಿದ್ದ ಪರಮೇಶ್ವರ್ ಮತ್ತುಳಿದ ಮೂವರನ್ನು ANFಪೊಲೀಸರು ರಕ್ಕಸರಂತೆ ಹಿಂಸಿಸಿ ಕೊಂದು ಎಸೆದಾಗ ರಾತ್ರೋರಾತ್ರಿ ಒಗ್ಗೂಡಿ ಸಾವಿರಾರು ಪೊಲೀಸರೆದುರು ಎದೆಯೊಡ್ಡಿ ಸವಾಲೆಸೆದು ನಿಂತಿದ್ದೀರಿ. ಮೊನ್ನೆ ಮೊನ್ನೆ ಧರ್ಮಸ್ಥಳ –ಬಾಳೇಹೊನ್ನೂರುಗಳಲ್ಲಿ ANF ದೌರ್ಜನ್ಯ ನಡೆಸಿದಾಗ ಅದರ ವಿರುದ್ಧ ಜನರೆಲ್ಲರೂ ಭುಗಿಲೆದ್ದು ಪ್ರತಿಭಟಿಸಲಾಗಿದ್ದಾರೆ. ಜನಕ್ಕೇನು ಸಾಧ್ಯವಿಲ್ಲ ಹೇಳಿ ? ಎಲ್ಲವೂ ಸಾಧ್ಯವಿದೆ. “ಶತ್ರು ಶಕ್ತಿ ಎಷ್ಟೇ ಇದ್ದರೂ ಪ್ರಜಾಶಕ್ತಿಗೆ ಸಾಟಿಯಾಗದು” ಎಂಬುದನ್ನು ತಿಳಿದುಕೊಂಡು ಸಂಘಟಿತರಾಗಿ ಎದುರಿಸೋಣ.

1 ಮೊದಲನೆಯದಾಗಿ ಪೋಲೀಸರು ಯಾರನ್ನೇ ಬಂಧಿಸಿ ಕರದೊಯ್ದರೂ ಕೂಡಲೇ ಪ್ರಚಾರಕ್ಕೊಯ್ಯಬೇಕು ಮತ್ತು ಅದನ್ನು ಖಂಡಿಸಿ ಹೆಂಗಸರು ಮತ್ತು ಮಕ್ಕಳೆನ್ನದೆ ಬೀದಿಗಿಳಿದು ಹೋರಾಡಬೇಕು.
2 ಬಂಧನಕ್ಕೊಳಗಾದ ಜನರ ಮನೆಗಳಿಗೆ ಊರಿನ ಜನರೇ ಬೆಂಬಲವಾಗಿ ನಿಂತು ಸಹಕರಿಸಬೇಕು
3 ಜನವಿರೋಧಿ ಸರ್ಕಾರಿ ಪಡೆಗಳ ಹಿಂಸೆಯನ್ನು ದೃಢವಾಗಿ ಎದುರಿಸಿ ಹೋರಾಟದ. ರಹಸ್ಯವನ್ನು ಕಾಪಾಡಬೇಕು.
4 ಪೋಲೀಸರ ಆಸೆ ಅಮಿಷಗಳ ಬಲೆಗೆ ಬೀಳದೆ ಅವರ ಎಂಜಲು ಕಾಸನ್ನು ಮುಲಾಜಿಲ್ಲದೆ ತಿರಸ್ಕರಿಸಬೇಕು
5 ಮಲೆನಾಡನ್ನು ಪೋಲೀಸರ ರಾಜ್ಯವಾಗಿಸಿದ ANF ಹಿಂಪಡೆಯಲು ಒತ್ತಾಯಿಸಿ ಹೋರಾಡಬೇಕು

ಆತ್ಮೀಯರೇ,

ಇದುವರೆಗಿನ ಪ್ರಪಂಚ ಚರಿತ್ರೆಯಲ್ಲಿ ಶೋಷಕ ಆಳುವ ವರ್ಗಗಳು ಅನುಕಂಪದಿಂದಲೋ, ಪ್ರೀತಿಯಿಂದಲೋ ದುಡಿವ ಜನರಿಗೆ ಯಾವುದನ್ನೂ ಒದಗಿಸಿಲ್ಲ. ಅವರು ಒದಗಿಸಿದ್ದೇ ಆದರೆ ಅದು ಲೂಟಿ, ಬಂಧನ , ಕೇಸು, ಚಿತ್ರಹಿಂಸೆಗಳನ್ನಷ್ಟೇ ! ಇವೆಲ್ಲವನ್ನೂ ಎದುರಿಸಿಯೂ ದುಡಿಯುವ ಜನರು ಒಂದಷ್ಟನ್ನು ಪಡೆದುಕೊಂಡಿದ್ದಾರೆ. ಇನ್ನಷ್ಟನ್ನು ಪಡೆದುಕೊಳ್ಳಲು ಮುನ್ನಡೆಯುತ್ತಿದ್ದಾರೆ. ಆದ್ದರಿಂದ ಎಲ್ಲರೂ ಒಗ್ಗೂಡಿ ಈ ದಮನವನ್ನು ಧೈರ್ಯದಿಂದ ಎದುರಿಸೋಣ . ಧೈರ್ಯದಿಂದ ಹಿಮ್ಮೆಟ್ಟಿಸೋಣ !!

**ಎಚ್ಚೆತ್ತ ಜನಧ್ವನಿಯನ್ನು ಹತ್ತಿಕ್ಕಲೆತ್ನಿಸಿದಷ್ಟೂ ಅದು ಹರಿತಗೊಳ್ಳುತ್ತದೆ !**

ನಿಮ್ಮೊಂದಿಗೆ,
ರಾಜ್ಯ ಸಮಿತಿ
ಸಿಪಿಐ ( ಮಾವೋವಾದಿ)
ಕರ್ನಾಟಕ

ಜುಲೈ 2009